

# 'ಬಘೀರ'ನಿಗೆ ಯಶಸ್ಸಿನ ಖುಷಿ

ನಟ ಶ್ರೀಮುರಳಿ ಅಭಿನಯದ 'ಬಘೀರ' ಸಿನಿಮಾ ಯಶಸ್ವಿ ಪ್ರದರ್ಶನ ಕಾಣುತ್ತಿದ್ದು, ಈ ಬೆನ್ನಲ್ಲೇ ಚಿತ್ರತಂಡ ಸಕ್ಸೆಸ್ ಮೀಟ್ ನಡೆಸಿದೆ. ನಿರ್ದೇಶಕ ಪ್ರಶಾಂತ್ ನೀಲ್ ಕಥೆ ಬರೆದಿರುವ ಈ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಒಳ್ಳೆಯ ಕಲೆಕ್ಷನ್ ಕೂಡ ಮಾಡುತ್ತಿದೆ.

ಈ ಸಮಯದಲ್ಲಿ ಯಶಸ್ಸಿನ ಖುಷಿಯಲ್ಲಿರುವ ನಟ ಶ್ರೀಮುರಳಿ ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಜೊತೆಗೆ 'ಬಘೀರ' ಚಿತ್ರದಲ್ಲಿ ತಮ್ಮ ಮೂರು ವರ್ಷದ ಜರ್ನಿಯ ತುಣುಕುಗಳನ್ನು ಹಂಚಿಕೊಂಡಿದ್ದಾರೆ.

'ಬಘೀರ ಚಿತ್ರದಲ್ಲಿನ ನನ್ನ ಪಾತ್ರ ಮಾನಸಿಕವಾಗಿ ಹಾಗೂ ದೈಹಿಕವಾಗಿ ನನ್ನಿಂದ ಅತಿ ಹೆಚ್ಚಿನದನ್ನು ಡಿಮ್ಯಾಂಡ್ ಮಾಡಿತ್ತು. ಐಪಿಎಸ್ ಆಫೀಸರ್ ವೇದಾಂತ್ ಹಾಗೂ ಬಘೀರ ಎಂಬ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಳ್ಳಬೇಕಾಗಿದ್ದು, ಬಹಳಷ್ಟು ತರಬೇತಿ ಹಾಗೂ ಡಯೆಟ್ ಒಳಗೊಂಡಿತ್ತು. ಮೂರು ವರ್ಷದಿಂದ ನಾನು ಎಲ್ಲವನ್ನೂ ಪಾಲಿಸಿದ್ದೆ. ಅದಕ್ಕೆ ಫಲವೂ ದೊರೆಯುತ್ತಿದೆ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಸಿನಿಮಾಗೆಂದೇ ಮೂರು ವರ್ಷದಿಂದಲೂ ಬಹಳ ಕಟ್ಟುನಿಟ್ಟಾಗಿ ಡಯೆಟ್ ಮಾಡುತ್ತಿದ್ದ ಅವರೀಗ ತಮ್ಮ ನಾಲಗೆ ಚಪಲ ತೀರಿಸಿಕೊಳ್ಳುತ್ತಿರುವುದಾಗಿಯೂ ನಗುತ್ತಾರೆ.

ಸಿನಿಮಾರಂಗದಲ್ಲಿ ಸುಮಾರು ಎರಡು ದಶಕಗಳಿಂದಲೂ ತೊಡಗಿಕೊಂಡಿರುವ ಅವರಿಗೆ ತಮ್ಮ ಸಾಮರ್ಥ್ಯವನ್ನು ಸಾಬೀತು ಮಾಡುವ ಒಳ್ಳೆಯ ಅವಕಾಶ ಈ ಸಿನಿಮಾ ಆಗಿತ್ತಂತೆ. 'ಯಾವುದೇ ಒಂದು ಗುರಿ ಸಾಧಿಸಲು ಹಾಗೂ ಸ್ಪಷ್ಟತೆ ಹೊಂದಲು ಮಾರ್ಗದರ್ಶಕರು ಅವಶ್ಯಕ. ನಮ್ಮ ಸಿನಿಮಾ ತಂಡದ ಪ್ರತಿಯೊಬ್ಬರೂ ಯಶಸ್ಸಿನಲ್ಲಿ ಪಾಲುದಾರರು. ಈ ಸಿನಿಮಾಗಾಗಿ ಕನ್ನಡಿಯ ಮುಂದೆ ನಿಂತು ರಿಹರ್ಸಲ್ ಮಾಡುತ್ತಿದ್ದೆ. ಈ ಪಾತ್ರದೊಳಗೆ ಇಳಿಯಲು ಏನೆಲ್ಲಾ ಪ್ರಯತ್ನಗಳನ್ನು ಮಾಡಿದ್ದೆ. ಪ್ರೇಕ್ಷಕರ ಪ್ರತಿಕ್ರಿಯೆ ನೋಡಿ, ಆ ಪ್ರಯತ್ನ, ಶ್ರಮ ಸಾರ್ಥಕವೆನಿಸುತ್ತಿದೆ' ಎಂದು ಭಾವುಕರಾಗಿದ್ದಾರೆ.

# ಶ್ರೀನಿಧಿ ಎದುರಿಸಿದ 'ಸ್ಕ್ರೀನ್‌ಸ್ಪೇಸ್' ಸವಾಲು

'ಕೆಜಿಎಫ್' ಸಿನಿಮಾ ಖ್ಯಾತಿಯ ಶ್ರೀನಿಧಿ ಶೆಟ್ಟಿ, ಮೊದಲ ಸಿನಿಮಾದಲ್ಲಿಯೇ ಕನ್ನಡ ಸಿನಿಮಾರಂಗದಲ್ಲಿ ಜನಪ್ರಿಯತೆ ಗಿಟ್ಟಿಸಿಕೊಂಡವರು. ಚೊಚ್ಚಿಲ ಅವಕಾಶವೇ ದೊಡ್ಡ ಬ್ಯಾನರ್‌ನಡಿಯಲ್ಲಿ ಸಿಕ್ಕಿದ್ದು ಅವರಿಗೆ ಅದೃಷ್ಟದ ಬಾಗಿಲನ್ನೂ ತೆರೆದಿತ್ತು. ಅಷ್ಟೇ ಅಲ್ಲ, ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರದ ಈ ಸಿನಿಮಾ ಸೀರೀಸ್‌ನಲ್ಲಿ ಬಂದಿದ್ದು, ರಾಕಿಂಗ್ ಸ್ಟಾರ್ ಯಶ್ ಅವರೊಂದಿಗಿನ ನಟನೆ ಅವರ ಕರಿಯರ್‌ಗೆ ಉತ್ತಮ ಅವಕಾಶವೇ ಆಗಿತ್ತು.

ಮೊದಲ ಭಾಗದಲ್ಲಿ ಮಿಂಚಿ ಮರೆಯಾದ ಪಾತ್ರವಾಗಿ ಅವರು ಕಾಣಿಸಿಕೊಂಡಿದ್ದು, ಸೀಕ್ವೆಲ್‌ನಲ್ಲೂ ಶ್ರೀನಿಧಿ ಅವರ ಮುಂದುವರೆದ ಪಾತ್ರದ ಬಗ್ಗೆ ತಪ್ಪು ಊಹೆಗಳು ಸೃಷ್ಟಿಯಾಗಿದ್ದವು. 'ಕೆಜಿಎಫ್ ಚಾಪ್ಟರ್ 2'ರಲ್ಲಿ ಕೂಡ ಶ್ರೀನಿಧಿ ಶೆಟ್ಟಿ ಅವರದ್ದು ಇಂಥದ್ದೇ ಬಂದುಹೋಗುವ ಪಾತ್ರ ಎಂಬ ಮಾತುಗಳು ಹರಿದಾಡಿದ್ದವು. ಆ ಸಮಯದಲ್ಲಿ ಶ್ರೀನಿಧಿ ಶೆಟ್ಟಿ ತಮಗೆ ಎದುರಾಗಿದ್ದ ಸವಾಲುಗಳ ಬಗ್ಗೆ ಮಾತನಾಡಿದ್ದಾರೆ. ಎರಡನೇ ಸಿನಿಮಾ ಬಿಡುಗಡೆಗೆ ತಾವೇಕೆ ಅಷ್ಟೊಂದು ಕಾತರರಾಗಿದ್ದರು ಎಂಬ ಬಗ್ಗೆಯೂ ಹೇಳಿದ್ದಾರೆ.

''ಕೆಜಿಎಫ್' ಸಿನಿಮಾದಲ್ಲಿ ನನ್ನ ಪಾತ್ರದ ಬಗ್ಗೆ ನನಗೆ ಸ್ಪಷ್ಟತೆ ಇತ್ತು. ಶೂಟಿಂಗ್ ಆರಂಭಿಸಿದಾಗ, ಸಿನಿಮಾ ಕಥೆ ದೊಡ್ಡದಿದ್ದು, ಇದನ್ನು ಎರಡು ಭಾಗಗಳಾಗಿ ಮಾಡಬೇಕು ಎಂದು ನಿರ್ಧರಿಸಲಾಯಿತು. ಹೀಗಾಗಿ ಭಾಗ ಒಂದರಲ್ಲಿ ನನ್ನ ಪಾತ್ರ ಸೀಮಿತವಾಯಿತು. ಹೀರೊ ಇಂಟ್ರೊಡಕ್ಷನ್ ಹಾಗೂ ಇತರೆ ಪಾತ್ರಗಳತ್ತ ಗಮನಹರಿಸಬೇಕಾಗಿತ್ತು. ಆ ಸಮಯದಲ್ಲಿ ನನ್ನ ಸ್ಕ್ರೀನ್‌ಸ್ಪೇಸ್ ಬಗ್ಗೆ ಮಾತುಗಳು ಕೇಳಿಬಂದಿದ್ದವು. ಸಿನಿಮಾ ದೀರ್ಘಾವಧಿ ಹಿಡಿದಿತ್ತು. ಕೋವಿಡ್ ಸಮಯವೂ ಸೇರಿ ಹಲವು ಒತ್ತಡಗಳು ಸೃಷ್ಟಿಯಾಗಿದ್ದವು. ಆದರೆ ನಿರ್ದೇಶಕ ಪ್ರಶಾಂತ್ ನೀಲ್ ಅವರ ಬಗ್ಗೆ ನಂಬಿಕೆ ಇಟ್ಟಿದ್ದೆ. ಸೀಕ್ವೆಲ್‌ನಲ್ಲಿ ರೀನಾ ಪಾತ್ರದ ಬಗ್ಗೆ ಅವರು ಭರವಸೆ ನೀಡಿದ್ದರು. ಹಾಗೇ ಆ ಭರವಸೆ ಎರಡನೇ ಸಿನಿಮಾದಲ್ಲಿ ಕೈ ಹಿಡಿಯಿತು' ಎಂದು ಹೇಳಿದ್ದಾರೆ.

'ಈ ಎಲ್ಲ ಸವಾಲು, ಅತಂತ್ರತೆ ಹಾಗೂ ಅನಿಶ್ಚಿತತೆ ನಡುವೆಯೂ ಈ ಪ್ರಾಜೆಕ್ಟ್‌ನಲ್ಲಿ ಕಮಿಟ್ ಆಗಿದ್ದು, ಪರಿಶ್ರಮ ಫಲಕೊಟ್ಟಿತು' ಎನ್ನುವ ಅವರನ್ನೀಗ ಹಲವು ಅವಕಾಶಗಳು ಅರಸಿ ಬಂದಿವೆ. ಸದ್ಯ 'ಹಿಟ್; ದಿ ಥರ್ಡ್ ಕೇಸ್' ಹಾಗೂ 'ಕಿಚ್ಚ 47' ಸಿನಿಮಾಗಳಲ್ಲಿ ಬಿಜಿಯಾಗಿದ್ದಾರೆ.

